toddy, cutting of date leaves was generally permitted by issue of licences. As already stated the Deputy Commissioners are authorised under these Rules to issue licence for cutting of leaves depending upon the availability of date groves in a locality.

It is learnt that in respect of Kadur Taluk the Kormara Sangha has already represented to the Deputy Commissioner, Chickmagalur, for permission to cut date leave for purposes of making baskets and this representation is under consideration by the Deputy Commissioner. In view of the decision of Government to discontinue sale of toddy in Chikamagalur district with effect from 1-7-1988 the Deputy Commissioner should be able to issue licences hereafter more liberally.

10 ಬೈಂದೂರಿಗೆ ಎಲೆಕ್ಟ್ರಿಕ್ ಸಬ್‌ಸ್ಟೇಷನನ್ನು ಸ್ಥಾಪಿಸುವ ಬಗ್ಗೆ

ಶ್ರೀ ಜಿ ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ ವಿದ್ಯುತ್ ಪೂರೈಕೆಯ ದೃಷ್ಟಿಯಿಂದ ಅತ್ಯಂತ ಅಲಕ್ಷಿತವಾದ ಕ್ಷೇತ್ರ-ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು. ಲೋ ಓಲ್ಟೇಜ್ ಕಾರಣ, ಬೈಂದೂರಿಗೆ ಪ್ರತ್ಯೇಕ ಸಬ್‌ಸ್ಟೇಷನ್‌ಗಾಗಿ ಒತ್ತಾಯಿಸಲಾಯಿತು. ಆದ ಮಂಜೂರಾದರು ಕಾರ್ಯಾರಂಭವಾಗಿಲ್ಲ. ಕುಂದಾಪುರದಲ್ಲಿ ಈಗ ಇರುವ ಅಧಿಕಾರಿಗಳಿಗೆ ಕೆಲಸದ ಒತ್ತಡದಿಂದಾಗಿ ಹೊಸ ಕನೆಕ್ಷನ್‌ಗಳಿಗೆ ವಿಪರೀತ ವಿಳಂಬ, ಬೈಂದೂರಿನಲ್ಲಿ ಕೆ.ಇ.ಬಿ.ಯ ಉಪ ವಿಭಾಗ ತೆರೆಯಬೇಕಂ. ಇಲ್ಲವಾದರೆ, ನಿರ್ವಹಣೆ-ವಿಸ್ತರಣೆಗಳಿಗೆ ಬಹಳ ತೊಂದರೆ ಆಗುತ್ತದೆ. ಟಾನ್ಸ್‌ಫಾರ್ಮರ್ ಸ್ಥಾಪಿಸಿ, ಲೈನ್ ಹಾಕಿ, ಪಂಪ್ಸೆಟ್ಟು ಇರಿಸಿದಲ್ಲಿ ಸಹ ಕನೆಕ್ಷನ್ ಕೊಟ್ಟಿಲ್ಲ. ಶಿರೂರಿನಲ್ಲಿ. ಉಪ್ಪುಂದ-ಮೆಡಿಕಲ್‌ನಲ್ಲಿ ಈ ರೀತಿ ಆಗಿದೆ. ಪಂಪು ಖರೀದಿಸಿದ ಕಿರಿಮಂಜೇಶ್ವರ ಕೊಡೇರಿಗೆ ಲೈನ್ ಹಾಕಿಲ್ಲ. ಉಡಮೊಗೆ, ಅಜ್ರಿ, ಬೆಳ್ಳಾಲ, ಜಡ್ಕಲ, ಮುದೂರುಗಳಲ್ಲಿ ಸಹ ಇಂತಹ ದೂರು ಇದೆ. ಗೃಹ ಬಳಕೆಗೆ ಸಹ ಇದೇ ರೀತಿ ಆಗಿದೆ. ಮಳೆಗಾಲ ಬರುವುದರೊಳಗೆ ಲೈನ್ ಹಾಕದಿದ್ದರೆ ಮತ್ತೊಂದು ವರ್ಷ ತಡವಾಗುತ್ತದೆ. ಈ ಎಲ್ಲಾ ವಿಚಾರಗಳಲ್ಲಿ ಸೂಕ್ತ ಕ್ರಮಕ್ಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಸಚಿವರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬೈಂದೂರಿನಲ್ಲಿ ಒಂದು ೩೩/೧೧ ಕೆವಿ ಔ ಎಂವಿಎ ಸಾಮರ್ಥ್ಯದ ಸಬ್ ಸ್ಟೇಷನ್ ಹಾಕಲು ಯೋಚಿಸಿದ್ದು ಲೈನಿನ ಸರ್ವೆ ಕೆಲಸ ಮುಗಿದಿದೆ. ಸಬ್ ಸ್ಟೇಷನ್ ಸ್ಥಾಪಿಸಲು ನಿವೇಶನದ ಆಯ್ಕೆಯಾಗಿದ್ದು ಅದನ್ನು ವಶಪಡಿಸಿಕೊಳ್ಳುವ ಬಗ್ಗೆ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಪತ್ರ ಬರೆಯಲಾಗಿದೆ. ಈ ಸಾಲಿನಲ್ಲಿ ಈ ಕೆಲಸಕ್ಕೆ ೧೫ ಲಕ್ಷ ರೂಪಾಯಿಗಳನು ಆಯವ್ಯಯದಲ್ಲಿ ಒದಗಿಸಲಾಗಿದ್ದು ಕೆಲಸವನ್ನು ಈ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ. ಈ ಸ ಸ್ಟೇಷನ್ ಕಾರ್ಯಾರಂಭ ಮಾಡಿದ ಮೇಲೆ ಸುತ್ತಮುತ್ತಲಿನ ಪ್ರದೇಶದಲ್ಲಿನ ಕಡಿಮೆ ಓಲ್ಟೇಜಿನ ಸ್ಥಿತಿ ಸುಧಾರಿಸುತ್ತದೆ.

ಬೈಂದೂರಿನಲ್ಲಿ ಉಪ ವಿಭಾಗ ತೆರೆಯುವ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ರಾಜ್ಯದಲ್ಲಿ ವಿಭಾಗ, ಉಪ ವಿಭಾಗಗಳ ಪುನರ್ ರಚನೆಯ ಬಗ್ಗೆ ಮಂಡಲಿ ಯೋಚಿಸಿದ್ದು ಅಗತ್ಯ ಕಂಡುಬಂದಲ್ಲಿ ಮಾಡಲಾಗುತ್ತದೆ. ಈ ಕೆಲಸ ಈಗ ಪ್ರಗತಿಯಲ್ಲಿದೆ. ಬೈಂದೂರಿನಲ್ಲಿ ಉಪ ವಿಭಾಗ ತೆರೆಯುವ ಪ್ರಶ್ನೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಕುಂದಾಪುರ ತಾಲ್ಲೂಕಿನಲ್ಲಿ ಕಳೆದ ಸಾಲಿನಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವುದರಲ್ಲಿ ಗಾರಿ ಮೀರಿ ಪ್ರಗತಿ ಸಾಧಿಸಲಾಗುತ್ತಿದೆ. ೧೯೮೭-೮೮ನೇ ಸಾಲಿನ ಗಾರಿ ೨೫೦ ಪಂಪುಸೆಟ್ಟುಗಳಿಗಿದ್ದು ಸಾಧನೆ ೩೧೭ ಪಂಪುಸೆಟ್ಟುಗಳು.

ರಾಜ್ಯದಲ್ಲಿ ಪ್ರತಿ ವರ್ಷವೂ ಪಂಪುಸೆಟ್ಟುಗಳಿಗೆ ವಿದ್ಯುತ್‌ಗಾಗಿ ನೊಂದಾಯಿಸಲ್ಪಡುವ ಅರ್ಜಿಗಳ ಸಂಖ್ಯೆ ವಾರ್ಷಿಕ ಗುರಿಯ ೧.೫ ಪಟ್ಟಿನಷ್ಟು ಆಗಿರುವುದರಿಂದ ಹಲವಾರು ಪ್ರಕರಣಗಳಲ್ಲಿ ವಿಳಂಬ ಆಗಿವಾರ್ಕ. ವಾರ್ಷಿಕ ಗುರಿಯನ್ನು ಲಭ್ಯವಿರುವ ಹಣಕ್ಕನುಗುಣವಾಗಿ ನಿರ್ಧರಿಸಿ ಗುರಿಗೆ ಅನುಗುಣವಾಗಿ ಸಾಮಗ್ರಿಗಳ ಸರಬರಾಜು ಆಗುತ್ತಿದೆ. ಹೀಗೆ ಗುರಿ ಮೀರಿ ಪ್ರಗತಿ ಸಾಧಿಸುತ್ತಿದ್ದರೂ ಕುಂದಾಪುರ ತಾಲೂಕಿನಲ್ಲಿ ಸಾಮಾರು ೩೦ ಯೋಜನೆಗಳ ಪಂಪು ಸೆಟ್ಟುಗಳ ಕೆಲಸ ಹಾಲಿ ಬಾಕಿ ಉಳಿದಿದೆ. ಪಂಪುಸೆಟ್ಟಿನ ಕೆಲಸವನ್ನು ಆದ್ಯತೆ ಸೂತ್ರಕ್ಕೆ ಅನುಗುಣವಾಗಿ ಮಾಡಲಾಗುತ್ತಿದೆ.

೧೧) ಕರಾವಳಿ ಪ್ರದೇಶಗಳಲ್ಲಿ ಸಮುದ್ರ ಕೊರೆತವನ್ನು ತಪ್ಪಿಸಲು ತಡೆ ಗೆದೇಡೆಗಳನ್ನು ನಿರ್ಮಿಸುವ ಬಗ್ಗೆ

ಶ್ರೀ ಬಸಪರಾಜ್ (ಬ್ರಹ್ಮಾವರ) —ಮಾನ್ಯ ಅಧ್ಯಕ್ಷರೆ, ಮಳೆಗಾಲ ಬರುತ್ತಿದೆ, ಕಡಲಕಿನಾರೆಯಲ್ಲಿ ಬಿರುಗಾಳಿ ಬೀಸುತ್ತಿದೆ. ಸಮುದ್ರ ತೀರದಲ್ಲಿ ವಾಸಿಸುವ ಜನರ ಬದುಕಿನಲ್ಲಿ ಬಿರುಗಾಳಿ ಬೀಸುವ ಆಂಜಿಕೆ ಪ್ರಾರಂಭವಾಗಿದೆ, ಕಾರಣ, ಕಡಲ ಕೊರೆತದ ಭೀತಿ. ಕರಾವಳಿಯುದ್ದಕ್ಕೂ ಪ್ರತಿ ವರ್ಷ ಕಡಲ ಕೊರೆತ. ಮನೆ, ಭೂಮಿ ಸಮುದ್ರ ಪಾಲು. ತೆಂಗು ಇತ್ಯಾದಿ ಫಲವೃಕ್ಷಗಳು ಅಡಿ ಮೇಲಾಗಿ. ಇದನ್ನು ತಪ್ಪಿಸಲು ಕೇಂದ್ರ ಸರಕಾರದ ನೆರವು ಪಡೆದು ತಡೆಗೋಡೆಯನ್ನು ಕೇರಳ ಮಾದರಿಯಲ್ಲಿ ನಿರ್ಮಿಸಿ ಎಂದು ಕರಾವಳಿಯ ಶಾಸಕರು ಒತ್ತಾಯಿಸುತ್ತಿದ್ದರೂ, ಶಾಸ್ವತ ಪರಿಹಾರಕ್ಕಾಗಿ ಸರಕಾರದ ಕಣ್ಣು ತೆರೆದಿಲ್ಲ. ತಾತ್ಕಾಲಿಕ ರಕ್ಷಣ ವ್ಯವಸ್ಥೆ ಮಾತ್ರ ಆಗುತ್ತಿದೆ. ಉಡುಪಿ ತಾಲ್ಲೂಕಿನ ಹೂಡೆಯಿಂದ ಕೋಡೆ ಬೆಂಗರೆ ತನಕ ಳ ಕಿಲೋಮಿಾಟರಿಗೆ ಕೊರೆತದ ಹಾನಿ ತಟ್ಟಿದಾಗ ಬರೇ ೧೦೦ ಅಡಿ ಉದ್ದಕ್ಕೆ ಹಿಂದೆ ರಕ್ಷಣ ಕೆಲಸ ಮಾಡಲಾಯಿತು. ಯಾವ ಆಸಕ್ತ ಜನರಿಗೆ ಈ ರಕ್ಷಣೆ ? ಉಳಿದ ಬಡವರನ್ನು ಯಾರೂ ಕೇಳುವವರಿಲ್ಲವೆ ಎಂದು ಜನ ಮೊರೆಯಿಡುತ್ತಿದ್ದಾರೆ. ಅವರ ರೋದನ ಸಮುದ್ರದ ಅಲೆಗಳ ಅಬ್ಬರದ ನಡುವೆ ಸ್ತಬ್ದವಾದರೆ ಪರಿಸ್ಥಿತಿ ಶೋಚನೀಯವಾದೀತು. ಸೂಕ್ತ ಕ್ರಮಕ್ಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರ ರೋದನವನ್ನು ಸಮುದ್ರದ ಅಲೆಗಳಿಗೆ ಹೋಲಿಸಬೇಕಾಗಿಲ್ಲ. ಉತ್ತರ ತರಿಸಿಕೊಡುತ್ತೇನೆ.

೧೨) ಕೆ.ಎಸ್.ಎಫ್.ಸಿ.ಯಂವರು ಸಣ್ಣ ಸಣ್ಣ ಉದ್ದಿಮೆಗಳ ಸಾಲ ವಸೂಲಿ ಮಾಡುವಾಗ ಲಿಲಾವು ಮಾಡುತ್ತಿರುವುದರ ಬಗ್ಗೆ

ಶ್ರೀ ಕೆ. ಎಚ್. ಪಾಟೀಲ್ (ಗದಗ).— ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್‌ನವರು ಸಣ್ಣ ಸಣ್ಣ ಉದ್ದಿಮೆಗಳ ಸಾಲ ವಸೂಲಿ ಬಗ್ಗೆ ಉದ್ದಿಮೆ ಲಿಲಾವು ಮಾಡುವ ಕೊನೆಯಂ ಕ್ರಮ ಕೈಕೊಳ್ಳುತ್ತಿದ್ದು ಇದರಿಂದ ಅನೇಕ ಪ್ರಾಮಾಣಿಕ ಉದ್ದಿಮೆದಾರರಿಗೆ ತೊಂದರೆಯಾಗಿದೆ. ಆದರೆ ಅದೇ ಸಂಸ್ಥೆಯ ಈಗಿನ ವ್ಯವಸ್ಥಾಪಕರು ದೊಡ್ಡ ದೊಡ್ಡ ಉದ್ದಿಮೆದಾರರಂ ಒಹ.ದೊಡ್ಡ ಬಾಕಿದಾರರಿಗೂ ಸಹ ಅವರ ಉದ್ದಿಮೆಯನ್ನು ಲಾಲವ್ ಮಾಡಲಾದವರಾಗಿದ್ದಾರೆ. ಈ ಪ್ರಕಾರದ ಪಕ್ಷಪಾತದ ಧೋರಣೆಯು ಒಕಾರಣವೇನಂಬುದನ್ನು ಮಾನ್ಯ ಮಂತ್ರಿವರ್ಯರು ಕಂಡುಹಿಡಿದು ಎಲ್ಲಾ ಸಣ್ಣ ಉದ್ದಿಮೆದಾರರಿಂದ ಸ್ವಲ್ಪ ಹಣ ಕಟ್ಟಿದವರಿಗೆ ಸಮಯ ಕೊಟ್ಟು ಉದ್ದಿಮೆಗಳು ಊರ್ಜಿತಗೊಳಿಸುವಂತೆ ಮಾಡಲು ಆದೇಶ ನೀಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ತರಿಸಿಕೊಡುತ್ತೇನೆ ಸ್ವಾಮಿ.

ಶ್ರೀ ಕೆ. ಎಚ್. ಪಾಟೀಲ್.—ಇದಕ್ಕೂ ಉತ್ತರ ತರಿಸಿಕೊಡಬೇಕಾ ?